## 2

# ತಂದೆಯೊಂದಿಗಿನ ಅನ್ಯೋನ್ಯತೆ

ಯೋಹಾನ 1ನೇ ಪತ್ರಿಕೆಯ ಐದು ಅಧ್ಯಾಯಗಳಲ್ಲಿ, ಕ್ರೈಸ್ತ ನಂಬಿಕೆಗೆ ಸಂಬಂಧ ಪಟ್ಟ ಐದು ಸಿದ್ಧಾಂತಗಳನ್ನು ತಿಳಿಸಲಾಗಿದೆ. ಒಂದು ಸಂಗೀತದ ಸಂಯೋಜನೆಯನ್ನು ಪುನಃ ಪುನಃ ಅಭ್ಯಾಸ ಮಾಡಿ ನಿರ್ಮಾಣಮಾಡಿರುವಂತೆ, ಈ ಸಿದ್ಧಾಂತಗಳನ್ನು ತಿಳಿಸಲಾಗಿದೆ.

ತನ್ನವರಾದ ಕ್ರೈಸ್ತರನ್ನು ವೃದ್ಧಿಗೊಳಿಸುವ ಸಲುವಾಗಿ, ಯೋಹಾನನು ಈ ಸಂಯೋಜನೆಯನ್ನು ಮಾಡಿರುವನು. ಅವರು ಒಪ್ಪಿಕೊಂಡಂಥ ಸಿದ್ಧಾಂತಗಳ ಸತ್ಯಗಳನ್ನು ಒತ್ತಿ ಹೇಳಿ, ಸುಳ್ಳು ಬೋಧಕರ ಕುರಿತಾಗಿ ಎಚ್ಚರಿಕೆ ನೀಡಿರುವನು. ಅವರಿಗೆ ರಕ್ಷಣೆಯ ಭರವಸೆಯನ್ನು ನೀಡಿ, ಅವರು ನೀತಿವಂತರಾಗಿ ಜೀವಿಸಬೇಕೆಂದು ತಿಳಿಸಿದನು. ಈ ಎಲ್ಲಾ ಸಂಗತಿಗಳ ಮೂಲಕ ಕ್ರೈಸ್ತರ ಕೆಲವು ಮಹತ್ವದ ಸತ್ಯಗಳನ್ನು ತಿಳಿಸಿದನು.

ಪ್ರತಿ ಅಧ್ಯಾಯಗಳನ್ನು ಧ್ಯಾನ ಮಾಡುವಾಗ, ಆ ಮಹತ್ವದ, ಸತ್ಯಗಳನ್ನು ಗ್ರಹಿಸಬಹುದಾಗಿದೆ. ಅಧ್ಯಾಯಕ್ಕನುಗುಣವಾದ, ತಲೇ ಬರಹಗಳನ್ನು ಗಮನಿಸೋಣ. ಆ ಅಧ್ಯಾಯದಲ್ಲೂ ಹಾಗೂ ಪೂರ್ಣ ಪುಸ್ತಕದಲ್ಲೂ ಯೋಹಾನನು ಆ ತಲೇ ಬರಹಗಳ ಕುರಿತು ಹೇಳಿರುವದನ್ನು ಗಮನಿಸೋಣ.

ಅಧ್ಯಾಯ 1ರಲ್ಲಿ "ತಂದೆಯೊಂದಿಗಿನ ಅನ್ಯೋನ್ಯತೆಯ[1] ..." ಬಗ್ಗೆ ಯೋಹಾನನು ಬರೆದು,

> ನಾವು ಕಂಡು ಕೇಳಿದ್ದು ನಿಮಗೂ ಗೊತ್ತಾಗಿ ನಮಗಿರುವ ಅನ್ಯೋನ್ಯತೆಯಲ್ಲಿ ನೀವೂ ಸೇರಬೇಕೆಂದು ಅದನ್ನು ನಿಮಗೆ ಪ್ರಸಿದ್ಧಿಪಡಿಸುತ್ತೇವೆ. ನಮಗಿರುವ ಅನ್ಯೋನ್ಯತೆಯು ತಂದೆಯ ಸಂಗಡಲೂ ಆತನ ಮಗನಾದ ಯೇಸು ಕ್ರಿಸ್ತನ ಸಂಗಡಲೂ ಇರುವಂಥದ್ದು (ವಚನ 3).

(1) ಅಂತಹ ಅನ್ಯೋನ್ಯತೆಯ ಅಗತ್ಯತೆ, (2) ಅನ್ಯೋನ್ಯತೆಯ ಮೂಲ ಹಾಗೂ ಅದರ ನಿರ್ವಹಣೆ, ಮತ್ತು (3) ದೇವರೊಂದಿಗಿನ ಅನ್ಯೋನ್ಯತೆಯ ನಿಮಿತ್ತ ಉಂಟಾಗುವ ಪ್ರತಿಫಲ ಇವುಗಳನ್ನು ನಾವು ಅಧ್ಯಯನ ಮಾಡೋಣ.

### ದೇವರೊಂದಿಗಿನ ಅನ್ಯೋನ್ಯತೆಯ ಅಗತ್ಯತೆ

ದೇವರ ಅನ್ಯೋನ್ಯತೆಯ ಕುರಿತಾಗಿ "ತಂದೆಯೊಂದಿಗಿನ ಅನ್ಯೋನ್ಯತೆಯ ಅಗತ್ಯತೆ ಏಕೆ?" ಎಂಬ ಪ್ರಶ್ನೆಯಿಂದ ಆರಂಭಿಸೋಣ. ನಾವು ಆರಾಧಿಸುವ ದೇವರ ಸ್ವಭಾವದಲ್ಲಿ ಉತ್ತರವು ಅಡಕವಾಗಿದೆ.

#### ಇತರೆ ದೇವತೆಗಳೊಂದಿಗಿನ ಮಾನವನ ಸಂಬಂಧ

ವಿವಿಧ ಸಮುದಾಯದಲ್ಲಿನ ಜನರು ತಮ್ಮದೇ ಆದ ದೇವತೆಗಳನ್ನು ಪೂಜಿಸುತ್ತಾರೆ. ಆ ಅನ್ಯೋನ್ಯತೆಯು ಅವರ ದೇವತೆಗಳಲ್ಲಿನ ಸ್ವಭಾವದಲ್ಲಿ ಅಡಕವಾಗಿದೆ.

*ನಿಸರ್ಗದ ದೇವತೆಗಳು:* ನಿಸರ್ಗದ ಕೆಲವು ವಸ್ತುಗಳನ್ನು ಕೆಲವರು ದೇವರೆಂದು ಪರಿಗಣಿಸಿರುವರು. ಅದರಲ್ಲಿ ಸೂರ್ಯ, ಚಂದ್ರ, ಹಾಗೂ ನದಿಗಳು ಒಳಗೊಂಡಿವೆ. ಅವುಗಳಿಂದ ಆಶೀರ್ವಾದ ಪಡೆಯಲು, ಜನರು ಅವುಗಳನ್ನು ಪೂಜಿಸುತ್ತಾರೆ.

*ಆತ್ಮದ ದೇವತೆಗಳು:* ಕೆಲವು ಆತ್ಮಗಳು ಭೂಮಂಡಲವನ್ನು ಆಕ್ರಮಿಸಿವೆ ಎಂದು

ಕೆಲವರು ನಂಬಿರುತ್ತಾರೆ. ಪ್ರತಿ ಗಿಡ ಹಾಗೂ ಪೊದೆಗಳಲ್ಲಿ ಅವುಗಳು ಇರುವದರಿಂದ, ಅವುಗಳನ್ನು ಅಡ್ಡಿಪಡಿಸಬಾರದು ಎಂಬದು ಅವರ ನಂಬಿಕೆ ಅವು ಪರೋಪಕಾರಿ ಹಾಗೂ ಶಾಪಕಾರಿಯಾಗಿರುವದರಿಂದ ಅವುಗಳನ್ನು ಮೆಚ್ಚಿಸಬೇಕು ಎನ್ನುವರು.

*ಗ್ರೀಕ್ ಹಾಗೂ ರೋಮಾಯರ ದೇವತೆಗಳು:* ಗ್ರೀಕ್ ಹಾಗೂ ರೋಮಾಯರ ದೇವತೆಗಳು ಆಕಾಶದಲ್ಲಿದ್ದು ಆಗಾಗ್ಗೆ ಅವುಗಳು ಮೇಲ್ಲೋಕದಿಂದ ಭೂಮಿಯನ್ನು ಗಮನಿಸಿ, ಕೆಲವು ಸಾರಿ ಇಳಿದು ಬಂದು ಮನುಷ್ಯರ ವ್ಯವಹಾರಗಳಲ್ಲಿ ತೊಡಗುವವು ಎಂಬ ನಂಬಿಕೆಯಿದೆ. ಕೆಲವು ಸಾರಿ ಅವುಗಳು ಅನುಕೂಲವನ್ನು ಕೆಲವು ಬಾರಿ ಅನಾನುಕೂಲತೆಗಳನ್ನು ಉಂಟುಮಾಡುವವು ಎಂಬ ಪ್ರತೀತಿಯಿದೆ. ಮನುಷ್ಯರು ಕೆಲವು ಬಾರಿ ಅವುಗಳನ್ನು ಮೆಚ್ಚಿಸಿ, ಅವುಗಳಿಂದಾಗುವ ಶಾಪವನ್ನು ತಪ್ಪಿಸಿಕೊಂಡು ಅಥವಾ ಅವುಗಳನ್ನು ವಂಚಿಸುತ್ತಾರೆ.

*ಹಿಂದುತ್ವ:* ಹಿಂದುಗಳು ಅನೇಕ ದೇವತೆಗಳನ್ನು ನಂಬಿ, ಅಂತಿಮವಾಗಿ ಅವುಗಳು ಒಂದೇ ಯಾಗುತ್ತವೆ ಎಂಬ ನಂಬಿಕೆಯನ್ನು ಹೊಂದಿರುವರು. ಅವರು ಎಲ್ಲಾ ದೇವತೆಗಳನ್ನು ಒಂದು ಗೂಡಿಸಿ, ಕೊನೆಯಲ್ಲಿ ಅವರು ಸಹ ಅದರಲ್ಲಿ ಲೀನವಾಗುವದು ಅವರ ಗುರಿಯಾಗಿದೆ.

**ನಾವು ದೇವರ ಅನ್ಯೋನ್ಯತೆ ಪಡೆಯುವಲ್ಲಿ ನಮ್ಮ ಪ್ರಭುವಿನೊಂದಿಗೆ ಸಂಬಂಧ ಹೊಂದಿದ್ದೇವೆ**

ಸತ್ಯವೇದದ ದೇವರ ಸ್ವಭಾವದ ಮೇರೆಗೆ, ನಾವುಗಳು ಆತನೊಂದಿಗೆ ಸಂಬಂಧವನ್ನು ಹೊಂದಿದ್ದೇವೆ. ಆತನು ಸರ್ವಶಕ್ತನು, ಸರ್ವಜ್ಞಾನಿಯೂ, ಸರ್ವವ್ಯಾಪಿಯೂ, ಪರಿಶುದ್ಧನು ಒಟ್ಟಾರೆ ನೀತಿವಂತನಾಗಿರುವನು. ಆತನ ಸ್ವಭಾವವನ್ನು ಅರಿತವನು ಯಾವುದೇ ಕಾರಣಕ್ಕೂ ಭಯದಿಂದ ಆತನ ಬಳಿಗೆ ಬರುವವನಾಗಿರಬಾರದು. ಆತನ ಕುರಿತು ವಾಗ್ವಾದ ಮಾಡದೆ, ಆತನ ಬಳಿಗೆ ಬರಬೇಕು.

ಅಥೇನಿಯದ ವಿಗ್ರಹ ಆರಾಧಕರಿಗೆ, ದೇವರು ಸರ್ವಸೃಷ್ಟಿಕರ್ತನು ಎಂದು ಪೌಲನು ಪ್ರಕಟಿಸಿ, "ಒಂದು ವೇಳೆ ಅವರು ತಡವಾಗಿ ಕಂಡುಕೊಂಡಾರೇನೋ ಎಂದು ತನ್ನನ್ನು ಹುಡುಕುವವರನ್ನಾಗಿ ಮಾಡಿದನು; ಆತನು ನಮ್ಮಲ್ಲಿ ಒಬ್ಬನಿಗೂ ದೂರವಾದವನಲ್ಲ" ಆತನಲ್ಲಿಯೇ ನಾವು ಜೀವಿಸುತ್ತೇವೆ ಇರುತ್ತೇವೆ (ಅಪೊಸ್ತಲರ ಕೃತ್ಯಗಳು 17:27, 28ಎ). ಕರ್ತನನ್ನು ತಿಳಿದವರು ಆತನನ್ನು ಹುಡುಕುತ್ತಾರೆ!

ಆತನ ಸ್ವಭಾವವನ್ನು ಅರಿತ ವಿವೇಕವು, ನಮ್ಮಲ್ಲಿ ಆತನಿಗಾಗಿ ಹಸಿವನ್ನು ಉಂಟು ಮಾಡಬೇಕು - ಆತನ ಸನ್ನಿಧಿಯಲ್ಲಿ ಸೇರುವ ಆಶೆಯನ್ನು ಉಂಟುಮಾಡಬೇಕು. ಆದ್ದರಿಂದಲೇ ಕೀರ್ತನೆಗಾರನು ಬರೆದು,

> ದೇವರೇ, ಬಾಯಾರಿದ ಜಿಂಕೆಯು ನೀರಿನ ತೊರೆಗಳನ್ನು ಹೇಗೋ ಹಾಗೆಯೇ ನನ್ನ ಮನವು ನಿನ್ನನ್ನು ಬಯಸುತ್ತದೆ. ನನ್ನ ಮನಸ್ಸು ದೇವರಿಗಾಗಿ, ಚೈತನ್ಯ ಸ್ವರೂಪನಾದ ದೇವರಿಗಾಗಿ ಹಾರೈಸುತ್ತದೆ (ಕೀರ್ತನೆ 42:1, 2ಎ).

ಆದ್ದರಿಂದ ಆತನ ಸಾಮಿಪ್ಯವನ್ನು ಬಯಸಿ ನಾವುಗಳು,

> ಕರ್ತನೇ ನಿನ್ನ ಬಳಿಗೆ, ಕರ್ತನೇ ನಿನ್ನ ಬಳಿಗೆ, ನಿನ್ನ ಶಿಲುಬೆಯ ಬಳಿಗೆ ಸೆಳೆದುಕೋ ಎಂದು ಹಾಡುತ್ತೇವೆ![2]

**ದೇವರ ಮೇಲಿನ ಆಶೆ ಹಾಗು ನಮ್ಮ ಕೊರತೆಯ ಕುರಿತ ಒಂದು ನಿದರ್ಶನ**

ಹೌದು ಮನುಷ್ಯನಿಗೆ ದೇವರ ಕೊರತೆಯಿದೆ. ಒಂದು ನಿದರ್ಶನದ ಮೂಲಕ ನಾವು ಏಕೆ ಆತನ ಅನ್ಯೋನ್ಯತೆಯನ್ನು ಬಯಸಬೇಕು. ನೀವು ಹಳ್ಳಿಯಲ್ಲಿರುವ ಒಬ್ಬ ಅನಾಥನೆಂದು ಊಹಿಸಿಕೊಳ್ಳಿರಿ. ಇತರರು ನೀಡಿದ ಆಹಾರವನ್ನು ಸೇವಿಸಿ, ಯಾವುದೋ

ಒಂದು ಸ್ಥಳದಲ್ಲಿ ಮಲಗುತ್ತಿರುವಿರಿ ಎಂದು ಭಾವಿಸಿರಿ. ನೀವು ಹೊಲಸೆಂದು ಜನರು ನಿಮ್ಮನ್ನು ತಿರಸ್ಕರಿಸಬಹುದು.

ಊರಿನ ಹಿರಿಯನು ಜನರಲ್ಲಿ ವಿಶೇಷವಾದವನು - ಬಲವುಳ್ಳವನೂ, ಮನೋಹರನು, ಐಶ್ವರ್ಯವಂತನೂ, ಜ್ಞಾನಿ ಹಾಗೂ ಯೋಗ್ಯವಾದವನು ಆಗಿದ್ದಾನೆ. ಎಂಬ ಈ ಸಂಗತಿಗಳನ್ನು ನೀನು ಅರಿತ ಮಾತ್ರಕ್ಕೆ ಅವನಿಂದ ನಿನಗೆ ಯಾವ ಪ್ರಯೋಜನವೂ ಆಗಲಾರದು, ಯಾಕೆಂದರೆ ನೀನು ಅನಾಥನಾಗಿರುವೆ. ಆ ದೊಡ್ಡ ಮನುಷ್ಯನ ಬಳಿಗೆ ಹೋಗಲು ನಿನಗೆ ಸಾಧ್ಯವೇ ಇಲ್ಲ.

ಒಂದು ದಿನ ಆ ಊರಿನ ಹಿರಿಯನು, ಊರಿನೊಳಗೆ ನಡೆದಾಡುವಾಗ ನಿನ್ನನ್ನು ಗಮನಿಸಿ, ತನ್ನ ಬಳಿಗೆ ನಿನ್ನನ್ನು ಕರೆಯುವನು. ನೀನು ನಡುಗುತ್ತಾ ಅವನ ಬಳಿಗೆ ಹೋಗುವಿ. ಆಗ ಅವನು ನಿನ್ನ ಪರಿಸ್ಥಿತಿಯ ವಿವರಣೆಯನ್ನು ಪಡೆಯುವನು. ಇತರರು ಸಹ ನೀನು ಅನಾಥನು, ರೋಗಿ ಸಾವಿನ ಅಂತ್ಯದಲ್ಲಿ ಇರುವನು ಎಂದು ವಿವರಿಸುವರು. ಆಗ ಅವನು ನಿನ್ನನ್ನು ಆಲಿಂಗಿಸಿ, ತನ್ನ ಮನೆಗೆ ಕರಕೊಂಡು ಹೋಗಿ, ನಿನ್ನ ಪಾಲನೆಯನ್ನು ಮಾಡಿ, ನಿನ್ನನ್ನು ತನ್ನ ಮಗನನ್ನಾಗಿ ಮಾಡಿಕೊಂಡು ತನ್ನ ಐಶ್ವರ್ಯವನ್ನು ನಿನಗೆ ಹಂಚುವನು. ಈಗ ನಿನಗೆ ಏನನ್ನಿಸಬಹುದು? ಏನೂ ಇಲ್ಲದವನಾದ ನೀನು, ಎಲ್ಲವನ್ನು ಹೊಂದಿರುವವನೊಂದಿಗೆ ಸಂಬಂಧವನ್ನು ಪಡೆಯಲಿಲ್ಲವೇ, ಅವನು ನಿನ್ನನ್ನು ಪ್ರೀತಿಸಿ, ಗುಣಪಡಿಸಿ, ಅದರಣೆ ಮಾಡಲಿಲ್ಲವೇ? ಆ ರೀತಿಯ ಅನಾಥನಾದ ನೀನು, ಪ್ರೀತಿಸುವ ಅಂಥ ವ್ಯಕ್ತಿಯೊಂದಿಗೆ ಒಂದಾಗಲು ಬಯಸುವದಿಲ್ಲವೇ?

ಈ ನಿದರ್ಶನವು ನಮ್ಮ ಪರಿಸ್ಥಿತಿಯನ್ನು ವಿವರಿಸುತ್ತದೆ - ನಾವೆಲ್ಲರೂ ಸಹ ಆ ಅನಾಥನಂತೆ ಸಹಾಯಕರು ಅನಾರೋಗ್ಯದಲ್ಲಿರುವವರು, ರೋಗದಿಂದ ಮರಣಕ್ಕೊಳಗಾಗಿ ನಿರೀಕ್ಷೆಯನ್ನು ಕಳಕೊಂಡವರು, ಅನರ್ಹರು ಆಗಿದ್ದೇವೆ. ಆದರೆ ದೇವರ ಅನ್ಯೋನ್ಯತೆಯ ಅವಕಾಶವನ್ನು ಹೊಂದಿದ್ದೇವೆ, ಆತನು ಎಲ್ಲವನ್ನು ಹೊಂದಿದವನಾಗಿರುವದರಿಂದ, ಆತನ ಪ್ರೀತಿಗೆ, ಆಶೀರ್ವಾದಕ್ಕೆ ಪಾತ್ರರಾಗಿದ್ದೇವೆ. ಆತನು ನಮ್ಮನ್ನು ಪೂರ್ಣ ತಿಳಿದಿದ್ದರೂ, ನಮ್ಮನ್ನು ಪ್ರೀತಿಸಿ, ಯಾವಾಗಲೂ ನಮಗಾಗಿ ಚಿಂತಿಸುತ್ತಾನೆ! ಈ ಲೋಕದಲ್ಲಿ ಇದಕ್ಕಿಂತಲೂ ಹೆಚ್ಚಾದದ್ದು ನಮಗೆ ಅಗತ್ಯವೇ? ದೇವರ ಸಾಮೀಪದಲ್ಲಿರುವಾಗ, ಇಂತಹ ತಂದೆಯೊಂದಿಗಿನ ಅನ್ಯೋನ್ಯತೆಯ ಅವಕಾಶವನ್ನು ಏಕೆ ನಿರ್ಲಕ್ಷಿಸಬೇಕು? ನಮ್ಮ ದೇವರು ದೊಡ್ಡವನೂ, ಪ್ರೀತಿಯುಳ್ಳವನೂ ಆಗಿದ್ದಾನೆ. ನಾವು ಆತನಿಂದ ಹಿಂಜಾರಿ ಹೋಗದೆ, ಆತನ ನಿತ್ಯವಾದ ಸಾಮೀಪ್ಯವನ್ನು ಬಯಸೋಣ!

**1 ಯೋಹಾನನ ಪತ್ರಿಕೆಯಲ್ಲಿರುವ ತಂದೆಯೊಂದಿಗಿನ ಅನ್ಯೋನ್ಯತೆ**

ನಾವು ಯಾವಾತನನ್ನು ಹುಡುಕುತ್ತಿದ್ದೇವೋ ಆತನೊಂದಿಗೆ ನಾನು ಅನ್ಯೋನ್ಯತೆಯನ್ನು ಪಡೆಯಲು ಸಾಧ್ಯವೇ? ಸಾಧ್ಯ ಎಂದು ಯೋಹಾನನು ತಿಳಿಸಿದ್ದಾನೆ. ಅವನು ಅನ್ಯೋನ್ಯತೆಯ ಬಗ್ಗೆ ತನ್ನ ಮೊದಲ ಪತ್ರಿಕೆಯಲ್ಲಿ ಆರಂಭಿಸಿ, ಪತ್ರಿಕೆಯು ಪೂರ್ಣವಾಗುವವರೆಗೆ ಇದನ್ನೇ ಮುಂದುವರೆಸಿದ್ದಾನೆ (1:3), ವಿವಿಧ ರೀತಿಯಲ್ಲಿ ಆತನೊಂದಿಗೆ ಅನ್ಯೋನ್ಯತೆಯನ್ನು ಹೊಂದಬಹುದೆಂದು ತಿಳಿಸಿರುವನು.

ಆತನನ್ನು ಅರಿಯುವ ಮೂಲಕ ಆತನೊಂದಿಗಿನ ಅನ್ಯೋನ್ಯತೆಯನ್ನು ಅರಿಯಬಹುದಾಗಿದೆ. ಉದಾಹರಣೆ: "ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ, ಆತನನ್ನು ಬಲ್ಲೆವೆಂದು ತಿಳುಕೊಳ್ಳುತ್ತೇವೆ" (1 ಯೊಹಾನ 2:3; 4:5).[3] ಕೆಲವು ಸಾರಿ ಆತನಲ್ಲಿರುವವರಾಗಿ ಅದನ್ನು ಪಡೆಯಬಹುದು (1 ಯೋಹಾನ 2:5; 5:20). ಅಥವಾ (1 ಯೋಹಾನ 4:4), *"ಆತನು ನಮ್ಮೊಂದಿಗಿರುವದರಿಂದಲೂ"* (1 ಯೋಹಾನ 4:6), "*ಆತನು ನಮ್ಮೊಂದಿಗಿರುವದರಿಂದಲೂ"* (1 ಯೋಹಾನ 5:19). *"ದೇವರಿಂದ ಹುಟ್ಟಿದವರಾಗಿ"*

(1 ಯೋಹಾನ 4:7; 5:1, 4, 18) ಪಡೆಯಬಹುದು. ನಾವು ದೇವರ ಮಕ್ಕಳೆಂದು ಕರೆಯಲ್ಪಟ್ಟಿದ್ದೇವೆ (1 ಯೋಹಾನ 3:1, 2, 10). ನಾವು ಅಂಥವರಾಗಿಯೇ ಲೋಕ ದಲ್ಲಿದ್ದೇವೆ ಎಂದು ಯೋಹಾನನು ಹೇಳಿರುವನು (1 ಯೋಹಾನ 4:17ಬಿ).

"ಆತನಲ್ಲಿ ಇರುವದು" ಎಂಬ ವ್ಯಾಖ್ಯಾನದಿಂದ ಆತನೊಂದಿಗಿನ ಅನ್ಯೋನ್ಯತೆಯನ್ನು ವಿವರಿಸಲಾಗಿದೆ. ಉದಾಹರಣೆಗಾಗಿ ನಾವು ಓದೋಣ.

> ನೀವಂತೂ ಯಾವ ಬೋಧನೆಯನ್ನು ಮೊದಲಿನಿಂದ ಕೇಳಿದ್ದೀರೋ ಅದು ನಿಮ್ಮಲ್ಲಿ ನೆಲೆಗೊಂಡಿರಲಿ. ಮೊದಲಿನಿಂದ ನೀವು ಕೇಳಿದ ಬೋಧನೆಯು ನಮ್ಮಲ್ಲಿ ನೆಲೆಗೊಂಡಿದ್ದರೆ ನೀವು ಸಹ ಮಗನಲ್ಲಿಯೂ ತಂದೆಯಲ್ಲಿಯೂ ನೆಲೆಗೊಂಡಿರುತ್ತೀರಿ (1 ಯೋಹಾನ 2:24).[4]

ಈ ವಾಕ್ಯಗಳ ಮೂಲಕ ದೇವರೊಂದಿಗಿನ ಅನ್ಯೋನ್ಯತೆಯ ಸಾಧ್ಯತೆಯನ್ನು ತಿಳಿಸಲಾಗಿದೆ. ಜೀವಿತದಲ್ಲಿ ಅನೇಕ ಸಂಗತಿಗಳು ಅನಿಶ್ಚಯ, ಆದರೆ ಆತನೊಂದಿಗಿರುವ ಅನ್ಯೋನ್ಯತೆ ನಿರಂತರವಾಗಿದೆ!

ಈ ವಿಷಯವನ್ನು ಅಧಿಕವಾದ ಒತ್ತಡದಿಂದ ಹೇಳಬೇಕು. ದೇವರ ಬಗ್ಗೆ ಏನನ್ನು ಅರಿತಿದ್ದೇವೆ? ಆತನು ಅರಸನಾಗಿರುವದರಿಂದ, ನಾವುಗಳು ಆತನಿಗೆ ವಿಧೇಯರಾಗಬೇಕು. ಆದರೆ ಅನ್ಯೋನ್ಯತೆಯ ವಿಚಾರದಲ್ಲಿ - ನಾವು ಅಧಿಕವಾಗಿ ಯೋಚಿಸಬೇಕಾಗಿದೆ. ಆರ್ಥಿಕವಾದ ವ್ಯವಹಾರದಂತೆ, ಈ ಅನ್ಯೋನ್ಯತೆಯನ್ನು ಪರಿಗಣಿಸಬೇಕು - ದೇವರು ನಮಗೆ ರಕ್ಷಣೆಯನ್ನು ಹಾಗೂ ನಿತ್ಯತ್ವವನ್ನು ನೀಡಿದ್ದಾನೆ. ಅದಕ್ಕೆ ಪ್ರತಿಯಾಗಿ, ನಾವುಗಳು ಸಹ ಆತನಿಗೆ ಏನನ್ನಾದರೂ ನೀಡಬೇಕು - ಮುಖ್ಯವಾಗಿ ವಿಧೇಯತೆಯನ್ನು ನೀಡಬೇಕು. ಅನ್ಯೋನ್ಯತೆ ಎಂದರೆ ನಿಖರವಾದ ಸಂಸರ್ಗ, ವೈಯಕ್ತಿಕವಾದ ಸಂಬಂಧ, ಮಕ್ಕಳಾಗಿರುವ ಅಧಿಕಾರ, ಮುಂದುವರೆದ ಸಂಬಂಧ, ಹಾಗೂ ಸ್ನೇಹ - ಅದು ತಂದೆಯೊಂದಿಗೆ ಮುಂದುವರೆದ ಸಂತೃಪ್ತಿಯಾಗಿರುತ್ತದೆ.

## ಅನ್ಯೋನ್ಯತೆಯ ಅರ್ಥ

ದೇವರ ಅನ್ಯೋನ್ಯತೆಯನ್ನು ಸಂಪಾದಿಸಿ, ಅದರಲ್ಲಿ ಹೇಗೆ ಮುಂದುವರೆಯಬಹುದು?

### ಅನ್ಯೋನ್ಯತೆಯನ್ನು ಸಂಪಾದಿಸಿಕೊಳ್ಳುವದು

ದೇವರ ಅನ್ಯೋನ್ಯತೆಗೆ ಪ್ರಥಮ ಹಂತವೇನು? ಅಧ್ಯಾಯ 1ರಲ್ಲಿ ಅದಕ್ಕೆ ಉತ್ತರವಿದೆ[5]:

> ನಾವು ನಿಮಗೆ ಪ್ರಸಿದ್ಧಿಪಡಿಸುವ ಜೀವವಾಕ್ಯವು ಆದಿಯಿಂದ ಇದ್ದದ್ದು. ನಾವು ಅದನ್ನು ಕಿವಿಯಾರೆ ಕೇಳಿ ಕಣ್ಣಾರೆ ಕಂಡು ಮನಸ್ಸಿಟ್ಟು ನೋಡಿ ಕೈಯಿಂದ ಮುಟ್ಟಿದ್ದೇವೆ. ಆ ಜೀವವು ಪ್ರತ್ಯಕ್ಷವಾಯಿತು - ತಂದೆಯ ಬಳಿಯಲ್ಲಿದ್ದು ನಮಗೆ ಪ್ರತ್ಯಕ್ಷವಾದಂಥ ಆ ನಿತ್ಯಜೀವವನ್ನು ನಾವು ಕಂಡು ಅದನ್ನು ಕುರಿತು ಸಾಕ್ಷಿ ಹೇಳಿದನ್ನು ನಿಮಗೆ ಪ್ರಸಿದ್ಧಿ ಪಡಿಸುತ್ತೇವೆ. ನಾವು ಕಂಡು ಕೇಳಿದ್ದು ನಿಮಗೂ ಗೊತ್ತಾಗಿ ನಮಗಿರುವ ಅನ್ಯೋನ್ಯತೆಯಲ್ಲಿ ನೀವೂ ಸೇರಬೇಕೆಂದು ಅದನ್ನು ನಿಮಗೆ ಪ್ರಸಿದ್ಧಿಪಡಿಸುತ್ತೇವೆ. ನಮಗಿರುವ ಅನ್ಯೋನ್ಯತೆಯು ತಂದೆಯ ಸಂಗಡವೂ ಆತನ ಮಗನಾದ ಯೇಸು ಕ್ರಿಸ್ತನ ಸಂಗಡಲೂ ಇರುವಂಥದು. ನಮ್ಮುಭಯತರ ಸಂತೋಷವು ಪರಿಪೂರ್ಣವಾಗಬೇಕೆಂದು ನಾವು ಈ ಮಾತುಗಳನ್ನು ಬರೆಯುತ್ತೇವೆ.

ಗ್ರೀಕ್ ಭಾಷೆಯ *ho* ಪದವನ್ನು ಆಂಗ್ಲದಲ್ಲಿ "ಏನನ್ನು" (ವಚನ 1) ಎಂದು ಭಾಷಾಂತರಿಸಿದ ಪದದಿಂದ ಮೊದಲನೆಯ ವಾಕ್ಯವು ಸರ್ವನಾಮದೊಂದಿಗೆ ಪ್ರಾರಂಭ

ವಾಗುತ್ತದೆ. ಯೋಹಾನನು "ನಾವು ಕಿವಿಯಾರೆ ಕೇಳಿ," "ಕಣ್ಣಾರೆ ಕಂಡು," ಮತ್ತು "ಕೈಯಿಂದ ಮುಟ್ಟಿದ್ದೇವೆ" ಎಂದು ಮುಂದುವರಿಸಿದನು. ಆತನು ಯೇಸುವಿನ ಕುರಿತು ಮಾತನಾಡುತ್ತಿದ್ದಾನೆಂದು ತಾರ್ಕಿಕವಾಗಿ ನಂಬಬಹುದು. ಯೇಸುವನ್ನು ಕುರಿತು ಸೂಚಿಸಿದಾಗ ಪುಲಿಂಗವನ್ನು ಉಪಯೋಗಿಸದೆ ನಪುಂಸಕ ಸರ್ವನಾಮವನ್ನು ಏಕೆ ಉಪಯೋಗಿಸಿದನು? ಇತರ ವಿವರಣೆಕಾರರ ಪ್ರಕಾರ, ಕ್ರಿಸ್ತನ ವ್ಯಕ್ತಿತ್ವಕ್ಕೆ ಬದಲಾಗಿ ಯೇಸು ಕ್ರಿಸ್ತನ ಕುರಿತ ಸಂದೇಶವನ್ನು ಯೋಹಾನನು ಒತ್ತಿ ಹೇಳಿದ್ದಾನೆಂದು ನಂಬುತ್ತಾರೆ.[6] ಇತರ ವಿವರಣೆಕಾರರು ಯೇಸುವಿನ ವ್ಯಕ್ತಿತ್ವವನ್ನು ಕುರಿತು ಮಾತ್ರವಲ್ಲದೆ "ವಾಕ್ಯವೆಂಬ"[7] ಆತನ ಗುಣಾತಿಶಯಗಳ ಕುರಿತಾಗಿದೆ ಎನ್ನುವರು. ಆದಾಗ್ಯೂ, ಅದನ್ನು ಓದಿದ ಮೊದಲಿಗರು "ದೇವರ ಕುಮಾರನಾದ ಯೇಸು ಕ್ರಿಸ್ತನ"[8] ಅಂಶವೆಂದು ಅರ್ಥೈಸಿಕೊಂಡರು (ವಚನ 3).

1:1-4 ರಲ್ಲಿ, ಈ ಪತ್ರಿಕೆಯ ಮುಖ್ಯ ಪ್ರಸ್ತಾಪವನ್ನು ಯೋಹಾನನು ತಿಳಿಸಿರುವನು ಆತನು "ಮಾನವನಾಗಿ" ಬಂದನು ಎಂಬದೇ. ಯೋಹಾನನ ಓದುಗರಿಗೆ ಅಡಚಣೆ ನೀಡುತ್ತಿದ್ದ ಸುಳ್ಳು ಬೋಧಕರುಗಳು, ಈ ಸಂಗತಿಯನ್ನು ಅಲ್ಲಗಳೆದಿರುವರು (1 ಯೋಹಾನ 2:18-23; 4:1-3). ಯೇಸುವಿನ ಮಾನವಿಯತೆಯ ವಾಸ್ತವಿಕತೆಯನ್ನು ಕುರಿತು ಯೋಹಾನನು ಹಾಗೂ ಅಪೊಸ್ತಲರು ಯೇಸುವಿನ ಮಾತುಗಳನ್ನು ಕಿವಿಯಾರೆ ಕೇಳಿದವರು, ಆತನನ್ನು ಕಣ್ಣಾರೆ ಕಂಡವರು, ಮತ್ತು ಕೈಯಿಂದ ಮುಟ್ಟಿದವರು ಹೇಳಿರುವರೆಂದು ವಿವರಿಸಿದನು. ಯೇಸು ಕೈಕಾಲುಗಳನ್ನು ಹೊಂದಿದ್ದ ನಿಜವಾದ ಮಾನವನು ಎಂದು ನಿರೂಪಿಸಿರುವರು!

ನಾವು ಆತನಿಂದ ರಕ್ಷಿಸಲ್ಪಟ್ಟಿರುವದರಿಂದ, ತಂದೆಯೊಂದಿಗೆ ಅನ್ಯೋನ್ಯತೆಯನ್ನು ಹೊಂದಿರುವೆವು. "ನಾವು ಆತನಲ್ಲಿ ಬದುಕಬೇಕೆಂದು" (1 ಯೊಹಾನ 4:9) ದೇವರು ತನ್ನ ಒಬ್ಬನೇ ಮಗನನ್ನು ಕಳುಹಿಸಿರುವನು. ಆದ್ದರಿಂದ ಆತನು "ನಮ್ಮ ಪಾಪ ನಿವಾರಣಾರ್ಥವಾಗಿರುವನು" (1 ಯೋಹಾನ 4:10). ದೇವರು "ತನ್ನ ಮಗನನ್ನು ಲೋಕ ರಕ್ಷಕನ್ನನಾಗಿ" (1 ಯೋಹಾನ 4:14) ಕಳುಹಿಸಿಕೊಟ್ಟಿರುವನೆಂದು ಯೋಹಾನನು ಬರೆದನು.

ಯೇಸು ನೀಡಿರುವ ರಕ್ಷಣೆಯನ್ನು ನಾವು ಹೇಗೆ ಪಡೆಯುತ್ತೇವೆ? ಕ್ರಿಸ್ತನಲ್ಲಿ ನಂಬಿಕೆ ಇಡುವ ಮುಕಾಂತರ. "ಯೇಸುವನ್ನು ಕ್ರಿಸ್ತನೆಂದು ನಂಬುವವನು ದೇವರಿಂದ ಹುಟ್ಟಿದ್ದಾನೆ" (1 ಯೋಹಾನ 5:1ಎ; 3:23 ನೋಡಿ); "ಯೇಸು ದೇವರ ಮಗನಾಗಿದ್ದಾನೆಂದು ಯಾವನು ಒಪ್ಪಿಕೊಂಡು ಹೇಳುತ್ತಾನೋ ಅವನಲ್ಲಿ ದೇವರು ನೆಲೆಗೊಂಡಿದ್ದಾನೆ. ಅವನು ದೇವರಲ್ಲಿ ನೆಲೆಗೊಂಡಿದ್ದಾನೆ" (1 ಯೋಹಾನ 4:15).

ಕ್ರಿಸ್ತನಿಗೆ ಸಂಬಂಧಿಸಿದ ವಿಶ್ವಾಸ ಮಾತ್ರ ನಮ್ಮನ್ನು ದೇವರ ಅನ್ಯೋನ್ಯತೆಗೆ ಸೇರಿಸುವದಿಲ್ಲ. ಗಲಾತ್ಯ 3:26ರಲ್ಲಿ, "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವ ಪುತ್ರರಾಗಿದ್ದೀರಿ," "ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿದ್ದೀರಿ" ಎಂದು ಮಂದಿನ ವಚನವು ಮುಂದುವರಿಯಿತು (ಗಲಾತ್ಯ 3:27). ಕ್ರಿಸ್ತನಲ್ಲಿ ನಂಬಿಕೆಯಿಟ್ಟು ಅರಿಕೆಮಾಡಿದ ನಂತರ, ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು, ಆಗ ನಾವು ದೇವರ ಮಕ್ಕಳಾಗುತ್ತೇವೆ. ಅನಂತರ ದೇವ ಜನರೊಂದಿಗೆ ಹಾಗೂ ಕ್ರಿಸ್ತನೊಂದಿಗೆ ಅನ್ಯೋನ್ಯತೆಗೆ ಸೇರುತ್ತೇವೆ.

**ಅನ್ಯೋನ್ಯತೆಯ ಮುಂದುವರಿಕೆ**

ದೇವರ ಕೃಪೆಯಿಂದ ಅನ್ಯೋನ್ಯತೆಯನ್ನು ಪಡೆದ ನಂತರ, ಅದರಲ್ಲಿ ಮುಂದುವರೆದು ಒಬ್ಬ ಕ್ರಿಸ್ತನು ಅದರಲ್ಲಿ ಹೇಗೆ ಮುನ್ನಡೆಯಬಹುದು ಎಂಬುದನ್ನು 1ನೇ

ಅಧ್ಯಾಯಲ್ಲಿ ತಿಳಿಸಲಾಗಿದೆ:

> ನಾವು ಆತನಿಂದ ಕೇಳಿ ನಿಮಗೆ ತಿಳಿಸುವ ವಾರ್ತೆಯಾವದಂದರೆ ದೇವರು ಬೆಳಕಾಗಿದ್ದಾನೆ; ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ ಎಂಬದೇ. ನಾವು ದೇವರ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ, ಸತ್ಯವನ್ನನುಸರಿಸುವವರಲ್ಲ. ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲಪಾಪವನ್ನು ನಿವಾರಣಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ. ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬುದು ನಮ್ಮಲಿಲ್ಲ. ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು. ನಾವು ಪಾಪಮಾಡಲಿಲ್ಲವೆಂದು ಹೇಳಿ ದರೆ ಆತನನ್ನು ಸುಳ್ಳುಗಾರನನ್ನಾಗಿ ಮಾಡುತ್ತೇವೆ, ಮತ್ತು ಆತನ ವಾಕ್ಯವು ನಮ್ಮಲ್ಲಿ ಇಲ್ಲ.

ಈ ವಚನದಲ್ಲಿ ಪರಸ್ಪರ ಪ್ರೀತಿ,[9] ವಿಧೇಯತೆ,[10] ಸತ್ಯದಲ್ಲಿರುವದು, ದೇವರೊಂದಿಗಿನ ಅನ್ಯೋನ್ಯತೆಗೆ ಮೂಲವಾಗಿದೆ.[11] ಆದಾಗ್ಯೂ 1 ಯೋಹಾನ 1:5-10ರಲ್ಲಿ, ದೇವರೊಂದಿಗಿನ ಅನ್ಯೋನ್ಯತೆಯಲ್ಲಿ ನೆಲೆಗೊಂಡಿರಬೇಕಾದರೆ "ಆತನು ಬೆಳಕಿನಲ್ಲಿರುವಂತೆ, ನಾವು ಬೆಳಕಿನಲ್ಲಿ" ನಡೆಯಬೇಕೆಂಬುದು ಶರತ್ತಾಗಿದೆ (1 ಯೋಹಾನ 1:7). ಆತನ ಅನ್ಯೋನ್ಯತೆ ಯಲ್ಲಿ ಭದ್ರವಾಗಿರುವೆವು ಬೆಳಕಿನಲ್ಲಿ ನಡೆಯುವದರ ಅರ್ಥವೇನು? ಆತನ ವಾಕ್ಯದಲ್ಲಿ ನಡೆದು, ಅಂದರೆ ಅದು "ಕಾಲಿಗೆ ದೀಪ" (ಕೀರ್ತನೆ 119:105)[12] ವಾಗಿರುವದರಿಂದ ನಾವು ನೀತಿಯಲ್ಲಿದ್ದು ದೇವರನ್ನೇ ಅನುಸರಿಸಬೇಕು.

ಕೆಲವರು ಪಾಪದಲ್ಲಿದ್ದು ದೇವರ ಅನ್ಯೋನ್ಯತೆಯಲ್ಲಿ ("ನಡೆಯಬಹುದು ಮತ್ತು ಕುಡಿಯುವುದು") ಎಂದು ಭಾವಿಸಿರುತ್ತಾರೆ (1 ಯೋಹಾನ 1:6). ಅದು ಅಸಾಧ್ಯವೆಂದು ಯೋಹಾನನು ತಿಳಿಸುತ್ತಾನೆ. ಯಾಕಂದರೆ, "ದೇವರು ಬೆಳಕು, ಆತನಲ್ಲಿ ಕತ್ತಲಿರುವದಿಲ್ಲ" (1 ಯೋಹಾನ 1:5). ಒಬ್ಬನು ಪಾಪದಲ್ಲಿ ಜೀವಿಸುತ್ತಾ, ದೇವರ ಅನ್ಯೋನ್ಯತೆಯಲ್ಲಿ ನಡೆದು, ಜೀವಿಸಲು ಸಾಧ್ಯವೇ? ಯೋಹಾನನ ಪತ್ರಿಕೆ ಅದನ್ನು "ಅಸಾಧ್ಯ" ಎನ್ನುತ್ತದೆ![13]

ಕೆಲವರಿಗೆ ಈ ಪಾಠದ ಅಗತ್ಯವಿದೆ. ಅವರಲ್ಲಿ ದೇವರಿಗೆ ಗೌರವವಿಲ್ಲ, ಅವರು ಭೋಗಗಳಿಗೆ ಒಳಗಾಗಿ ಪಾಪದಲ್ಲಿ ಇರುವರು - ಆದಾಗ್ಯೂ ಕೊರತೆಗಳು ಬರುವಾಗ ದೇವರ ಸಹಾಯಕ್ಕಾಗಿ ಬೇಡುತ್ತಾರೆ! ಬೆಳಕಿನಲ್ಲಿರುವ ದೇವರಿಂದ ಉತ್ತರವನ್ನು ಬಯಸಿ,[14] ಕತ್ತಲಿನಲ್ಲಿ ಜೀವಿಸುವವರಾಗಿದ್ದಾರೆ?

ಬೆಳಕಿನಲ್ಲಿ ನಡೆಯುವದು ಅಂದರೆ, ಕ್ರೈಸ್ತರು ಪಾಪವಿಲ್ಲದೆ ಜೀವಿಸುವದು ಎಂಬ ಅರ್ಥವೇ. ಕ್ರೈಸ್ತರಾಗುವ ಮೊದಲು ಮತ್ತು ನಂತರವೂ ಪಾಪಮಾಡಿದ್ದೇವೆ. ನಮ್ಮಲ್ಲಿ ಪಾಪವಿಲ್ಲ ಎಂದು ಹೇಳಿದರೆ, ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಸತ್ಯವು ನಮ್ಮಲ್ಲಿ ಇರುವದಿಲ್ಲ, "ನಾವು ಆತನನ್ನು ಸುಳ್ಳುಗಾರನನ್ನಾಗಿ ಮಾಡುತ್ತೇವೆ, ಮತ್ತು ಆತನ ವಾಕ್ಯವು ನಮ್ಮಲ್ಲಿರುವದಿಲ್ಲ" (1 ಯೋಹಾನ 1:8, 10).[15] ಹೇಗೂ ನಾವುಗಳು ಪಾಪ ಮಾಡುವಾಗ, ನಾವು ಅರಿಕೆ ಮಾಡಿದರೆ, ನಮ್ಮ ಅನ್ಯೋನ್ಯತೆಯ ಭದ್ರವಾಗಿ, ನಂಬಿಗಸ್ತನಾದ ದೇವರು ನಮ್ಮನ್ನು ಕ್ಷಮಿಸುತ್ತಾನೆ (1 ಯೊಹಾನ 1:9).[16]

ನಾವು ಕ್ರಿಸ್ತನನ್ನು ನಂಬಿ, ಆತನ ವಾಕ್ಯದ ಬೆಳಕಿನಲ್ಲಿ ನಡೆಯುವುದಾದರೆ ನಾವು ಅನ್ಯೋನ್ಯತೆಯನ್ನು ಪಡೆದು, ಅದರಲ್ಲಿ ಮುಂದುವರೆಯಲು ಸಾಧ್ಯವಿದೆ. ಪಾಪದ ಅರಿಕೆಯನ್ನು

ಮಾಡಿ, ದೇವರ ಮಾರ್ಗದರ್ಶನದಂತೆ ಬದುಕುತ್ತೇವೆ. ನಮ್ಮ ಒಳ್ಳೇತನದಿಂದ ಅನ್ಯೋನ್ಯತೆ ಪಡೆಯದೆ "ನಮ್ಮ ಪಾಪಗಳನ್ನು ಶುದ್ಧಿಮಾಡುವ ಕ್ರಿಸ್ತನ ನಿಮಿತ್ತ ಪಡೆಯುತ್ತೇವೆ" (1 ಯೋಹಾನ 1:7).[17]

## ಅನ್ಯೋನ್ಯತೆ ಎಂಬ ಪ್ರತಿಫಲ

ದೇವರ ಅನ್ಯೋನ್ಯತೆಯಿಂದ ದೊರಕುವ ಫ್ರತಿಫಲವೇನು? ಅದರಲ್ಲಿ ಮುಂದುವರೆಯುವಾಗ ಏನು ದೊರೆಯುತ್ತದೆ? ಆತನ ಬೆಳಕಿನಲ್ಲಿ ನಡೆಯುವದರಿಂದ ಪಾಪದ ಪರಿಹಾರವಾಗುತ್ತದೆ, ಮತ್ತು ಆತನ ಬರೋಣದಲ್ಲಿ ನಿರೀಕ್ಷೆವುಳ್ಳವರಾಗುತ್ತೇವೆ (1 ಯೋಹಾನ 2:28). ದೇವರ ಚಿತ್ತದಂತೆ ಪ್ರಾರ್ಥಿಸುವದಾದರೆ ಅದನ್ನು ಪಡೆಯುವೆವು ಎಂದು ಮುಂದೆ ಹೇಳಲಾಗಿದೆ (1 ಯೊಹಾನ 5:14).

ತಂದೆಯಾದ ದೇವರು ತನ್ನ ಮಕ್ಕಳ ಮನವಿಯನ್ನು ಕೇಳುತ್ತಾನೆ. ಅನ್ಯೋನ್ಯತೆಯಲ್ಲಿ ಮತ್ತೊಂದು ಆಶೀರ್ವಾದವಿದೆ. ವಚನ 7ರಲ್ಲಿ: "ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲಪಾಪವನ್ನು ನಿವಾರಣಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ." ಆತನ ಬೆಳಕಿನಲ್ಲಿ ನಡೆದು, ಅನ್ಯೋನ್ಯತೆ ಹಾಗೂ ಪಾಪಕ್ಷಮೆಯನ್ನು ಮಾತ್ರ ಹೊಂದದೆ, "ಪರಸ್ಪರ ಅನ್ಯೋನ್ಯತೆಯನ್ನು" ಸಹ ಹೊಂದುತ್ತೇವೆ. ದೇವರ ಅನ್ಯೋನ್ಯತೆ ಯೊಂದಿಗೆ ಪರಸ್ಪರ ಅನ್ಯೋನ್ಯತೆಯನ್ನು ಸಹ ಆನಂದಿಸುತ್ತೇವೆ. ಇದರಿಂದ ನಮ್ಮ ಅನ್ಯೋನ್ಯತೆಯು ರಹಸ್ಯವಾದದ್ದಲ್ಲ ಎಂದು ಅರಿಯುತ್ತೇವೆ.

ಒಬ್ಬನ ಸಂಗಡವಿರುವ ಅನ್ಯೋನ್ಯತೆಯ ಸಂಬಂಧಕ್ಕೆ ಮತ್ತೊಬ್ಬನನ್ನು ಹೇಗೆ ಅಂಗೀಕರಿಸಬಹುದು? ದೊಡ್ಡ ಕುಟುಂಬದಲ್ಲಿ ತಂದೆ ತಾಯಿಗಳು ಮಕ್ಕಳನ್ನು ಪ್ರೀತಿ ಸುವಂತೆ, ಮಕ್ಕಳು ಪರಸ್ಪರ ಪ್ರೀತಿ ಮಾಡುವದನ್ನು ಊಹಿಸಬಹುದು. ಅದರಲ್ಲಿ ಪ್ರೀತಿ ಸಿದವರು ತಂದೆತಾಯಿಯರಿಗೂ ಜೊತೆಯವರಿಗೂ ಸಮೀಪಸ್ತರಾಗಿರುತ್ತಾರೆ. ತಂದೆಯ ಸಂಬಂಧವನ್ನು ಸಹ ಮರೆಯುವ ಹಾಗಿಲ್ಲ, ಸಹೋದರ, ಸಹೋದರಿಯರೊಂದಿಗೆ ಸಂಬಂಧವನ್ನು ಗಮನಿಸುತ್ತೇವೆ.

ಹಾಗೆಯೇ ಸಭೆಯು ದೇವರ ಕುಟುಂಬವಾಗಿದೆ. ಪ್ರತಿಯೊಬ್ಬರೂ ದೇವರಿಗೆ ಸಮೀಪ ರಾಗಿರುವಂತೆ, ಸಹೋದರ ಸಹೋದರಿಯರ ಸಂಗಡ ಸಮೀಪರಾಗಿರುತ್ತಾರೆ. ಈ ಕುಟುಂಬದಲ್ಲಿ ಅಸೂಯೆ, ಚಿಂತೆ, ಹಾಗೂ ತಾರತಮ್ಯಕ್ಕೆ ಅಸ್ಪದವಿರುವದಿಲ್ಲ. ಎಲ್ಲರೂ ದೇವ ಮಕ್ಕಳಾಗಿರುವದರಿಂದ ದೇವರನ್ನು ಪ್ರೀತಿಸಿ, ಆತನೊಂದಿಗೆ ಒಂದಾಗಿರುತ್ತಾರೆ, ಇದರಿಂದ ಒಬ್ಬರನ್ನೊಬ್ಬರು ಪ್ರೀತಿಸಿ ಇತರೆ ಸದಸ್ಯರೊಂದಿಗೆ ಒಂದಾಗಿರುತ್ತಾರೆ. ದೇವರೊಂದಿಗಿನ ಅನ್ಯೋನ್ಯತೆಯಿಂದ ಉಂಟಾಗುವ ಪರಿಣಾಮವೇ ಸಭೆಯ ಅನ್ಯೋನ್ಯತೆಯಾಗಿರುತ್ತದೆ.

## ಮುಕ್ತಾಯ

ದೇವರ ಅನ್ಯೋನ್ಯತೆಯಿಂದ, ಪ್ರತಿಫಲ ಇದೆಯೇ? ಹೌದು, ಅದರಲ್ಲಿ ಅನ್ಯೋನ್ಯತೆಯೇ ವಿಶೇಷವಾದ ಪ್ರತಿಫಲವಾಗಿದೆ! ದೇವರ ಅನ್ಯೋನ್ಯತೆಯಿಂದ ನಿರೀಕ್ಷೆ ನಿತ್ಯವಾದ ಮಹಿಮೆವುಂಟಾಗುತ್ತದೆ. ಆದ್ದರಿಂದ ಪ್ರತಿದಿನ ಆತನೊಂದಿಗೆ ಬದುಕಿ ಜೀವಿಸೋಣ.

---

ಟಿಪ್ಪಣಿಗಳು

[1]ಗ್ರೀಕ್‌ನ "ಕೊಯಿನೋನಿಯ" ಎಂದರೆ ಸಾಮಾನ್ಯ ಸಂಬಂಧ. (W. E. Vine, Merrill F.

Unger, and William White, Jr., *Vine's Complete Expository Dictionary of Old and New Testament Words* [Nashville: Thomas Nelson Publishers, 1985], 233.) [2]Lowell Mason, "Nearer, My God, to Thee," *Songs of Faith and Praise,* comp. and ed. Alton H. Howard (West Monroe, La.: Howard Publishing Co., 1996). [3]ಕ್ರೈಸ್ತರ 1 ಯೋಹಾನದ ತಿಳುವಳಿಕೆ 2:13, 14; 4:7, 8; 5:20. [4]1 ಯೋಹಾನ 2:6, 27, 28; 3:6, 24; 4:12, 13, 15, 16 ದೇವರಲ್ಲಿ ನಾವಿರುವುದು ನಮ್ಮಲ್ಲಿ ದೇವರಿರುವ ಬಗ್ಗೆ ಹೇಳುವ ವಚನಗಳಿವು. ಇದು ಮಾತ್ರವಲ್ಲದೆ ಕ್ರೈಸ್ತರು "ಕ್ರೈಸ್ತರು ಬೆಳಕಿನಲ್ಲಿ ನೆಲೆಗೊಂಡಿದ್ದಾರೆ" (2:10) ಮತ್ತು "ದೇವರ ಬೀಜವು ಆತನಲ್ಲಿ ನೆಲೆಗೊಂಡಿದೆ" (3:9). ಇನ್ನೊಂದು ವಿಧದಲ್ಲಿ, ಕ್ರೈಸ್ತನು ತನ್ನ ಸಹೋದರರರನ್ನು ಪ್ರೀತಿಸದೆ ಇರುವವನಾದರೆ ಆತನು "ಮರಣದಲ್ಲೇ ಇದ್ದಾನೆ" (3:14) ತನ್ನ ಸಹೋದರರನನ್ನು ದ್ವೇಶಿಸುವವನಲ್ಲಿ ನಿತ್ಯ ಜೀವವು ಇರುವುದಿಲ್ಲ (3:15); ತನ್ನ ಸಹೋದರನಿಗೆ ಸಹಾಯವನ್ನು ನೀಡಲು ಬಯಸದವನಲ್ಲಿ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವುದಿಲ್ಲ (3:17). [5]ಸಮಾನವಾದ ಸಂದೇಶ (1:1-14). [6]Stephen S. Smalley, *1, 2, 3 John,* Word Biblical Commentary (Waco, Tex.: Word Books, 1984), 6; F. F. Bruce, *The Epistles of John: Introduction, Exposition and Notes* (N.p.: Pickering & Inglis, 1970; reprint, Grand Rapids, Mich.: Wm. B. Eerdmans Publishing Co., 1986), 35. [7]Guy N. Woods, *A Commentary on the New Testament Epistles of Peter, John, and Jude* (Nashville: Gospel Advocate Co., 1983), 210. [8]Thomas F. Johnson, *1, 2, and 3 John,* New International Biblical Commentary (Peabody, Mass.: Hendrickson Publishers, 1993), 25. (Emphasis removed.) [9]ಎಲ್ಲವನ್ನು ನೋಡಿ 1 ಯೋಹಾನ 3:14, 15, 17; 4:8, 12, 13. [10]ನೋಡಿ 1 ಯೋಹಾನ 2:24ಎ ಮತ್ತು 2:17ಬಿ.

[11]ನೋಡಿ 1 ಯೋಹಾನ 2:24. [12]ಸಹೋದರ ಸೋದರಿಯರನ್ನು ಪ್ರೀತಿಸುವದು (1 ಯೋಹಾನ 2:9-11). [13]ಮೊದಲ ಯೋಹಾನ 1:5-7ರಲ್ಲಿ ಪಾಪವನ್ನು ತ್ಯಜಿಸಿ, ನೀತಿಯ ಜೀವನವನ್ನು ಜೀವಿಸುವದು. ಉದಾಹರಣೆಗೆ 1 ಯೋಹಾನ 2:1, 29; 3:6, 10. [14]4:8 "ದೇವರು ಬೆಳಕು" 4:8, 16 ದೇವರು ಪ್ರೀತಿ ಸ್ವರೂಪಿ. [15](1) ಅನ್ಯೋನ್ಯತೆಯ ಸಂಗಡ ಪಾಪದ ಸಂಪರ್ಕ (ವಚನ 6), (2) ಪಾಪದ ನಿಯಮವನ್ನು ನಿರಾಕರಿಸುವದು (ವಚನ 8), (3) ಪಾಪವನ್ನು ಒಪ್ಪದೆ ಇರುವದು (ವಚನ 10). ಈ ಮೂವರನ್ನು ಕೂಡ ಯೋಹಾನನು ಕಂಡಿಸಿದನು. (John R. W. Stott, *The Epistles of John,* The Tyndale New Testament Commentaries [Grand Rapids, Mich.: Wm. B. Erdmans Publishing Co., 1960]. 72-79.) [16]ಕ್ರೈಸ್ತರು ಸಹ ಪಾಪಕ್ಕಾಗಿ ಮಾನಸಾಂತರ ಪಡಬೇಕು (ಅಪೊಸ್ತಲರ ಕೃತ್ಯಗಳು 8:22). [17]1:7ರಲ್ಲಿ ಇರುವ ಕ್ರಿಯಾಪದಗಳಾದ "ನಡೆ," "ಹೊಂದು," "ಶುದ್ಧ ಪಡಿಸಿಕೋ" ಎಂಬವು ವರ್ತಮಾನಕಾಲದಲ್ಲಿವೆ. ಅಂದರೆ ಕಾರ್ಯವು ಮುನ್ನಡೆಯುತ್ತಿದೆ ಎಂಬುದನ್ನು ಸೂಚಿಸುತ್ತದೆ: "ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ."